ಸೂಕ್ಷ್ಮವಾದ, ಭಾವ ಪ್ರಧಾನವಾದ ಲಾಸ್ಯವು ಅವರಿಗೆ ಇಷ್ಟವಾಯಿತು. ಲಾಸ್ಯದ ಧೋರಣೆಯನ್ನು ಅವರು ಬಹುವಾಗಿ ಶ್ಲಾಘಿಸಿದ್ದರು. ಅದೇರೀತಿ ಸಿಯಾಟಲ್‌ನಲ್ಲಿ 2007ರಲ್ಲಿ ನೃತ್ಯ ಮಾಡಿದ ಬಳಿಕ ಪ್ರೊಫೆಸರ್ ಒಬ್ಬರು ನನ್ನ ಸಂದರ್ಶನ ಮಾಡಿದ್ದರು. ನಾನು ಮಣಿಪುರದ ದೇವಾಲಯ ನೃತ್ಯ ಮತ್ತು ಅಲ್ಲಿನ ಭಕ್ತರ ತಲ್ಲೀನತೆ, ಕಣ್ಣೀರು ಹಾಕುವ ಭಾವವನ್ನು ವಿವರಿಸಿ, ಆ ಭಾವತೀವ್ರತೆಯನ್ನು ವೇದಿಕೆಯ ಮೇಲೆ ಸಾಕಾರಗೊಳಿಸಲಾಗುತ್ತದೋ ಇಲ್ಲವೋ ಎಂಬುದು ಕಲಾವಿದರ ಶ್ರಮವನ್ನು ಅವಲಂಬಿಸಿರುತ್ತದೆ ಎಂದು ಹೇಳಿದೆ. ಅವರು ತಕ್ಷಣ, 'ನಿನ್ನೆಯ ಪ್ರದರ್ಶನದಲ್ಲಿ ರಾಧೆಯ ನೃತ್ಯ ನೋಡುತ್ತ, ಆಕೆಯ ಅಗಲಿಕೆಯ ಅಭಿನಯ ಕಂಡು ಸಭಿಕರು ಕಣ್ಣೀರು ಹಾಕಿದ್ದನ್ನು ನಾನು ನೋಡಿದ್ದೇನೆ' ಎಂದು ಹೇಳಿದರು. ಕಲಾವಿದರಿಗೆ ಪ್ರೇಕ್ಷಕರ ಮನಮುಟ್ಟುವುದು ಸಾಧ್ಯವಾದರೆ ಅದಕ್ಕಿಂತ ದೊಡ್ಡ ಸಾಧನೆ ಇನ್ನೇನಿದೆ?

**◆ ಹೊಸತಲೆಮಾರಿನವರ ಜೊತೆ ನೀವು ನಿತ್ಯವೂ ಮಾತನಾಡುವಿರಿ. ಅವರ ಕಲಿಕೆಯ ಸ್ವರೂಪ ಹೇಗಿದೆ? ಅವರಿಗೆ ಏನು ಹೇಳಬಯಸುವಿರಿ?**

ಈಗಿನ ಮಕ್ಕಳು ಕಲಾಪ್ರಕಾರಗಳನ್ನು ಕಲಿಯುವುದಕ್ಕೆ ಪೂರಕ ವಾತಾವರಣ ಇಲ್ಲ. ಅವರು ಹತ್ತಾರು ಪರೀಕ್ಷೆಗಳನ್ನು ಬರೆಯುತ್ತ, ಅದಕ್ಕೆ ಬೇಕಾಗುವ ತರಗತಿಗಳಿಗೆ ಹಾಜರಾಗುತ್ತಾ ಸದಾ ಒತ್ತಡದಲ್ಲಿ ಇರುತ್ತಾರೆ. ಅವೆಲ್ಲದರ ನಡುವೆ ಈ ಕಲಾಪ್ರಕಾರಗಳ ಕಲಿಕೆಯ ಅವಕಾಶ ಅವರಿಗೆ ಕೊನೆಯದಾಗಿ ದೊರೆಯುತ್ತದೆ. ಒಂದುವೇಳೆ ಅವರ ಇತರ ಓದಿಗೆ ಸಮಯದ ಕೊರತೆ ಇದ್ದರೆ ಮೊದಲು ಬಲಿಯಾಗುವುದು ಈ ಕಲಾ ತರಗತಿಗಳೇ. ಈ ಎಲ್ಲ ತೊಡಕುಗಳ ನಡುವೆ ಮಕ್ಕಳು ಕಲಿತು ರಂಗಪ್ರವೇಶ ಮಾಡುತ್ತಾರೆ ಎಂದಾದರೆ ಅದು ಅವರ ಸಾಧನೆಯೇ ಸರಿ. ಅವರ ಸಾಧನೆಯ ಮುಂದೆ ನಾನು ಸೀನಿಯರ್ ಎಂಬ ಹಮ್ಮುಬಿಮ್ಮೆಲ್ಲ ಏನೇನೂ ಅಲ್ಲ. ಪುಟ್ಟಹುಡುಗಿಯೊಬ್ಬಳು ರಂಗಪ್ರವೇಶಕ್ಕೆ 'ಅಜ್ಜಿ, ಬನ್ನಿ' ಎಂದರೆ ನಾನು ಭರ್ಜರಿಯಾಗಿ ಅಲಂಕಾರ ಮಾಡಿಕೊಂಡು ಓಡೋಡಿ ಹೋಗುವೆ. ಅಂತಹ ಕಾರ್ಯಕ್ರಮಗಳಿಗೆ ಹೋಗಲು ತುದಿಗಾಲಲ್ಲಿ ನಿಂತಿರುತ್ತೇನೆ. ನಾನು ಹೋಗುವುದರಿಂದ ಆ ಕೂಸಿಗೆ ಏನಾದರೂ ಸಹಾಯವಾದರೆ, ನನಗೆ ಅದುವೇ ಖುಷಿ. ನೃತ್ಯಕ್ಕಾಗಿ ನಾನು ಅಷ್ಟು ಮಾಡಬಹುದಾದರೆ ಅದು ನನ್ನ ಭಾಗ್ಯವೇ.

ಎಲ್ಲ ಕಲಾಪ್ರಕಾರಗಳ ಪೈಕಿ ನೃತ್ಯವೇ ಅತ್ಯಂತ ಉತ್ತಮವಾದುದು ಎಂದು ನಂಬುವವಳು ನಾನು. ಅದು ಯೋಗಿಕ್ ಸಾಧನೆಯಂತೆಯೇ. ಪರಿಪೂರ್ಣತೆಗಾಗಿ ವರ್ಷಗಟ್ಟಲೆ ಸಾಧನೆ ಮಾಡಬೇಕಾಗುತ್ತದೆ. ಅಂತಹ ಪರಿಪೂರ್ಣತೆ ಬಂದರೆ ಮಾತ್ರ ವೇದಿಕೆಯಲ್ಲಿ ನರ್ತಿಸುತ್ತ ಪ್ರೇಕ್ಷಕರಲ್ಲಿ ರಸಾನುಭೂತಿಯನ್ನು ಸೃಷ್ಟಿಸುವುದು ಸಾಧ್ಯ. ನಮ್ಮ ಅಂತರಂಗದ ನೋವು, ಬಹಿರಂಗದ ನೋವು ಎಲ್ಲವನ್ನೂ ನೃತ್ಯದ ಮೂಲಕವೇ ಮರೆಯುವುದು ಸಾಧ್ಯ. ಸಾಮರಸ್ಯವನ್ನು ಸೃಷ್ಟಿಸುವ ನೃತ್ಯವನ್ನು ಕಲಿಯುವವರಿಗೆ ನಾವು ಸದಾ ಪ್ರೋತ್ಸಾಹ ನೀಡಬೇಕು. ಯುವಜನರಿಗೆ ಈಗ ಬೇಕಾದಷ್ಟು ಮಾಹಿತಿ ಸಿಗುತ್ತದೆ. ಅದನ್ನೇ ಅವರು ಜ್ಞಾನವೆಂದು ಭ್ರಮಿಸುತ್ತಾರೆ. ಅಥವಾ ತಾವು ಕಲಿಯುತ್ತಿರುವ ಶಾಸ್ತ್ರೀಯ ನೃತ್ಯಪ್ರಕಾರಕ್ಕೆ ಎಲ್ಲೆಲ್ಲಿಂದಲೋ, ಯಾವುದೋ ವಿಚಾರಗಳನ್ನು ಸೇರಿಸಿಕೊಳ್ಳುತ್ತಾರೆ. ಆದರೆ, ಸೃಜನಶೀಲತೆಯು ಶಾಸ್ತ್ರೀಯತೆಯ ಚೌಕಟ್ಟಿನಲ್ಲಿಯೇ ನಡೆದರೆ ಚಂದ. ಉದಾಹರಣೆಗೆ ಹೇಳುವುದಾದರೆ, ಮಣಿಪುರಿ ನೃತ್ಯದೊಳಗೆ ಆಕ್ರೋಬ್ಯಾಟ್, ಕಸರತ್ತುಗಳನ್ನು ತಂದರೆ ಏನು ಚಂದ ಹೇಳಿ. ನಮ್ಮ ವಿದ್ಯಾರ್ಥಿಗಳು ಕೆಲವರು ಜಗತ್ತಿನ ವಿವಿಧೆಡೆಯ ಸಾಹಿತ್ಯಕೃತಿಗಳನ್ನು ಮಣಿಪುರಿ ನೃತ್ಯಕ್ಕೆ ಅಳವಡಿಸುವ ಕೆಲಸ ಮಾಡಿದ್ದಾರೆ. ಹೀಗೆ ಪ್ರಕಾರದೊಳಗೆಯೇ ಸೃಜನಶೀಲವಾಗಿ ಕೆಲಸ ಮಾಡುವುದಕ್ಕೆ ಯುವಜನರು ಮುಂದಾಗಬೇಕು. ಆಗ ಪರಂಪರೆಯು ಸಮೃದ್ಧವಾಗುತ್ತಾ ಸಾಗುತ್ತದೆ. ತಂತ್ರಜ್ಞಾನದ ದೆಸೆಯಿಂದಾಗಿ ಮೊಬೈಲ್‌ನಲ್ಲಿ ಸಿಕ್ಕಸಿಕ್ಕ ವಿಚಾರಗಳನ್ನೆಲ್ಲ ಓದಿ, ಎಲ್ಲವನ್ನು ತಿಳಿದುಕೊಂಡಿರುತ್ತಾರೆ, ಆದರೆ ಯಾವ ಜ್ಞಾನಕ್ಷೇತ್ರದಲ್ಲಿಯೂ ಅವರು ಪ್ರಭುತ್ವ ಸಾಧಿಸುವುದಿಲ್ಲ ಎಂಬುದು ಬೇಸರದ ಸಂಗತಿ. ಯಾವುದಾದರೂ ಒಂದು ಕಲಾಪ್ರಕಾರವನ್ನು ಆಯ್ಕೆ ಮಾಡಿಕೊಂಡು ಯುವಜನತೆ ಗಂಭೀರ ಅಧ್ಯಯನಕ್ಕೆ ಹೆಚ್ಚು ಒತ್ತುಕೊಡಬೇಕು. ಅದು ಅವರ ಬದುಕನ್ನು ಉತ್ತುಂಗಕ್ಕೆ ಏರಿಸುತ್ತದೆ.

●